ದಿನಾಂಕ 04-11-2023 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಎದುರುದಾರರ ಪರ ಶ್ರೀ ಎಸ್.ಆರ್ ವಕೀಲರಿಂದ ಶ್ರೀ ಜಿ.ಪಿ.ಎಸ್ ವಕೀಲರ ಪರವಾಗಿ**

1) ಈಗ ನಾನು ಕಟ್ ಬೆಳ್ತೂರಿನಲ್ಲಿ ವಾಸವಾಗಿದ್ದೇನೆ. ನಾನು ಮೊದಲಿನಿಂದಲೂ ಕಟ್ ಬೆಳ್ತೂರಿನಲ್ಲಿ ವಾಸವಾಗಿದ್ದೇನೆ. ಈಗ ನಾನು ದಿನಗೂಲಿ ಕೆಲಸ ಮಾಡುತ್ತಿದ್ದೇನೆ. ನಾನು ದೇವಸ್ಥಾನದ ಕೌಂಟರ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಕಳೆದ 2 ವರ್ಷದಿಂದ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಕಟ್ ಬೆಳ್ತೂರಿನ ಶ್ರೀ ಭದ್ರಮಹಾಂಕಾಳಿ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದೇನೆ.

2) ನಾನು 2 ನೇ ಪಕ್ಷಗಾರನ ಕಾರ್ಖಾನೆಯಲ್ಲಿ ಕೆಲಸ ಮಾಡಿರುತ್ತೇನೆ. ನಾನು 2007 ರಿಂದ 2019 ರ ವರೆಗೆ 2 ನೇ ಪಕ್ಷಗಾರನ ಕಾರ್ಖಾನೆಯಲ್ಲಿ ಕೆಲಸ ಮಾಡಿರುತ್ತೇನೆ. 2019 ರ ಯಾವ ತಿಂಗಳಿನಲ್ಲಿ 2 ನೇ ಪಕ್ಷಗಾರ ಕೆಲಸ ನಿಲ್ಲಿಸಿದೆ ಎಂದು ಹೇಳಲು ಬರುವುದಿಲ್ಲ. ಸದರಿ ಕಾರ್ಖಾನೆಯಲ್ಲಿ ಸೂಪರ್ ವೈಸರ್ ಎಂದು ಕೆಲಸ ಮಾಡುತ್ತಿದ್ದ ನಮ್ಮ ಊರಿನಾತನ ಸಹಾಯದೊಂದಿಗೆ 2 ನೇ ಪಕ್ಷಗಾರನ ಕಾರ್ಖಾನೆಯಲ್ಲಿ ನಾನು ಕೆಲಸಕ್ಕೆ ಸೇರಿಕೊಂಡಿರುತ್ತೇನೆ. 2007 ನೇ ಸಾಲಿನ ಯಾವ ತಿಂಗಳಿನಲ್ಲಿ ನಾನು ಕೆಲಸಕ್ಕೆ ಸೇರಿಕೊಂಡಿದ್ದೇನೆಂದು ನೆನಪಿರುವುದಿಲ್ಲ. 2007 ರಲ್ಲಿ ನಾನು 2 ನೇ ಪಕ್ಷಗಾರನ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದ ಬಗ್ಗೆ ದಾಖಲೆ ಇರುವುದಿಲ್ಲ.

3) ನಾನು ದಿನಗೂಲಿ ಆಧಾರದ ಮೇಲೆ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ಮೊದಲಿಗೆ 3 ತಿಂಗಳ ಕಾಲ ತರಬೇತಿ ಅವಧಿಯಲ್ಲಿ ನನಗೆ ಪ್ರತಿದಿನ ರೂಪಾಯಿ 80 ರಂತೆ ಕೂಲಿ ಕೊಡುತ್ತಿದ್ದರು ನಂತರದಿಂದ ರೂಪಾಯಿ 700 ರಂತೆ ಪ್ರತಿದಿನ ಕೂಲಿ ಕೊಡುತ್ತಿದ್ದರು. ಪ್ರತಿದಿನ ರೂಪಾಯಿ 700 ರಂತೆ ದಿನಗೂಲಿ ಪಾವತಿಸಿದ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ದಿನಗೂಲಿಯನ್ನು ಕೆಲಸಕ್ಕೆ ಹೋದ ದಿನ ಮಾತ್ರ ಕಾರ್ಖಾನೆಯವರು ಕೊಡುತ್ತಿದ್ದರು. ನಾನು 2 ನೇ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಕಾರ್ಖಾನೆಯಲ್ಲಿ ತೆಂಗಿನಕಾಯಿಯನ್ನು ಒಡೆದು ಕೊಡುವ ಕೆಲಸ ಮಾಡುತ್ತಿದ್ದೆನು. 2 ನೇ

ಪಕ್ಷಗಾರ ಕಾರ್ಖಾನೆಯು ತೆಂಗಿನಕಾಯಿ ಅಂದರೆ ಕೊಬ್ಬರಿಯ ಪುಡಿ ತಯಾರಿಸುವ ಕೆಲಸ ಮಾಡುತ್ತಿತ್ತು. ಸದರಿ ಕಾರ್ಖಾನೆಯಲ್ಲಿ 45 ರಿಂದ 80 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಕೆಲಸ ಇದ್ದರೆ ಮಾತ್ರ ನನಗೆ ಕೆಲಸಕ್ಕೆ ಕರೆಯುತ್ತಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಪ್ರತಿದಿನ ಕೆಲಸ ಇದ್ದೆ ಇರುತ್ತಿತ್ತು. ಕಾರ್ಖಾನೆಯಲ್ಲಿ ಪ್ರತಿದಿನ 75 ಜನರಿಗೆ ಕೆಲಸ ಇರುತ್ತಿರಲಿಲ್ಲ , ಆದರೆ ಕಾರ್ಖಾನೆಯಲ್ಲಿ ಹತ್ತಿರದಲ್ಲಿದ್ದ ನಮ್ಮಂತವರನ್ನು ಪ್ರತಿದಿನ ಕರೆಯುತ್ತಿದ್ದರು.

4) ಕಾರ್ಖಾನೆಯಿಂದ ನನ್ನ ಮನೆ 10 ನಿಮಿಷದಲ್ಲಿ ನಡೆದುಕೊಂಡು ಹೋಗುವ ಅಂತರದಲ್ಲಿರುತ್ತದೆ. ಪ್ರತಿ ವಾರದ ಕೊನೆಯಲ್ಲಿ ಕಾರ್ಮಿಕರಿಗೆ ದಿನಗೂಲಿಯನ್ನು ನಗದು ರೂಪದಲ್ಲಿ ಒಟ್ಟಿಗೆ ಕೊಡುತ್ತಿದ್ದರು. ಕೆಲಸದ ಒತ್ತಡಕ್ಕೆ ಅನುಗುಣವಾಗಿ ಕಾರ್ಖಾನೆಯವರು ಕಾರ್ಮಿಕರನ್ನು ಆಯಾ ದಿನ ಕೆಲಸಕ್ಕೆ ಕರೆಯುತ್ತಿದ್ದರು. ಕಾರ್ಖಾನೆಯಲ್ಲಿ ಕೆಲಸ ಇಲ್ಲದೇ ದಿನ ಕಾರ್ಮಿಕರು ಬೇರೆ ಕೆಲಸ ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. ಕಾರ್ಖಾನೆ ಮುಚ್ಚಿದಾಗ ನನಗೆ ಕೂಲಿ ಹಣ ಬಾಕಿ ಕೊಡುವುದು ಇರಲಿಲ್ಲ. ನಾನು 2 ನೇ ಪಕ್ಷಗಾರ ಕಾರ್ಖಾನೆಯಲ್ಲಿ ಕೆಲಸಕ್ಕೆ ಹೋಗುತ್ತಿದ್ದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಪ್ರತಿದಿನ ಹಾಜರಿಯನ್ನು ಕಾರ್ಖಾನೆಯವರು ತೆಗೆದುಕೊಳ್ಳುತ್ತಿರಲಿಲ್ಲ, ಆದರೆ ದಿನಗೂಲಿ ಕೊಟ್ಟ ಬಗ್ಗೆ ಸಹಿ ಪಡೆದುಕೊಳ್ಳುತ್ತಿದ್ದರು. ನಾನು ದಿನಗೂಲಿ ನೌಕರನಾಗಿದ್ದ ಕಾರಣ ಕಾರ್ಖಾನೆಯವರು ನಮ್ಮ ಹಾಜರಾತಿ ತೆಗೆದುಕೊಳ್ಳುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಕಾರ್ಖಾನೆಯ ಒಳಗೆ ಹೋದಾಗ ಸಹಿ ಮಾಡಿ ಹೋಗುತ್ತಿದ್ದೆನು.

5) ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯ ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನ್ನ ತಿಳುವಳಿಕೆಯಲ್ಲಿ ಇರುತ್ತದೆ. ದಿನಾಂಕ 14-11-2007 ರಿಂದ 08-07-2019 ರವರೆಗೆ ನಾನು ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದೇನೆಂದು ವಕೀಲರಿಗೆ ಮಾಹಿತಿ ಕೊಟ್ಟಿದ್ದೇನೆ. ನನಗೆ ಮಾಸಿಕ ರೂಪಾಯಿ 21 ಸಾವಿರ ಸಂಬಳ ಬರುತ್ತಿತ್ತು ಎಂದು ಯಾವುದೇ ದಾಖಲೆ ಕೊಟ್ಟಿರುವುದಿಲ್ಲ.

6) 2 ನೇ ಪಕ್ಷಗಾರ ಕಾರ್ಖಾನೆಯು ಯಾವ ಕಾರಣಕ್ಕೆ ಮುಚ್ಚಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ವಿಚಾರಿಸಿದಾಗ ಕಾರ್ಖಾನೆಯವರು ಏಕೆ ಮುಚ್ಚಿದ್ದೇವೆ ಎಂದು

ಹೇಳಿರುವುದಿಲ್ಲ. ನಾನು ಕಾರ್ಖಾನೆ ಮುಚ್ಚುವ ಕಾಲಕ್ಕೆ ಕೆಲಸ ಮಾಡದೇ ಇದ್ದ ಕಾರಣ ಯಾವ ಕಾರಣಕ್ಕೆ ಕಾರ್ಖಾನೆ ಮುಚ್ಚಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ಕಾರ್ಖಾನೆಯವರು ನಮ್ಮನ್ನು ವಜಾ ಮಾಡಿರುವುದಿಲ್ಲ. ನಾನು ಸಂಘಟನೆ ಮೂಲಕ ಕಾರ್ಮಿಕ ಇಲಾಖೆಗೆ ಅರ್ಜಿ ಕೊಟ್ಟಿದ್ದೇನೆ. ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದೆ. ಸದರಿ ಅರ್ಜಿಗೆ ನಾನು ಸಹಿ ಮಾಡಿರುತ್ತೇನೆ. ಅರ್ಜಿ ಕೊಡುವ ಸಮಯಕ್ಕೆ ನಾನು ಕಾರ್ಮಿಕ ಇಲಾಖೆಯ ಕಚೇರಿಗೆ ಹೋಗಿದ್ದ ಬಗ್ಗೆ ನೆನಪಿರುವುದಿಲ್ಲ. ಅರ್ಜಿಯಲ್ಲಿ ಯಾವ ಕಾರಣಕ್ಕೆ ನನ್ನ ಕೆಲಸ ಹೋಗಿತ್ತು ಎಂದು ಉಲ್ಲೇಖ ಮಾಡಿರುವುದಿಲ್ಲ. ನಾನು ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಕಾರ್ಖಾನೆಯವರು ನನನ್ನು ಕೆಲಸದಿಂದ ವಜಾ ಮಾಡಿರುವುವರು ಎಂದು ಉಲ್ಲೇಖ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

7) ನಾನು ಕಾರ್ಮಿಕ ಇಲಾಖೆಗೆ ಯಾವ ದಿನಾಂಕದಂದು ಅರ್ಜಿ ಕೊಟ್ಟಿದ್ದೇನೆ ಎಂದು ನೆನಪಿರುವುದಿಲ್ಲ. ಕಾರ್ಮಿಕ ಇಲಾಖೆಗೆ ಅರ್ಜಿ ಕೊಡುವ ಮೊದಲು ಕಾರ್ಖಾನೆಯವರಿಗೆ ನಾನು ಸಂಪರ್ಕ ಮಾಡಿರುವುದಿಲ್ಲ. ಕಾರ್ಖಾನೆಯವರು ನನ್ನ ಹೆಸರಿನಲ್ಲಿ ಭವಿಷ್ಯ ನಿಧಿ ಖಾತೆ ಆರಂಭಿಸಿರುತ್ತಾರೆ. 2008 ರಿಂದ ನನ್ನ ಭವಿಷ್ಯ ನಿಧಿ ಖಾತೆ ಆರಂಭವಾಗಿದ್ದು 2019 ರವರೆಗೆ ಚಾಲ್ತಿಯಲ್ಲಿತ್ತು. ಆ ಕುರಿತು ನನ್ನ ಬಳಿ ದಾಖಲೆ ಇರುತ್ತದೆ. ನನ್ನ ಭವಿಷ್ಯ ನಿಧಿಯ ದಾಖಲೆಯನ್ನು ಅರ್ಜಿಯಲ್ಲಿ ಹಾಜರುಪಡಿಸಿದ್ದೇನೆ. ನನ್ನ ಭವಿಷ್ಯ ನಿಧಿ ಖಾತೆ ಈಗ ಚಾಲ್ತಿಯಲ್ಲಿ ಇರುವುದಿಲ್ಲ. ಭವಿಷ್ಯ ನಿಧಿಯ ಖಾತೆಯಲ್ಲಿನ ಹಣವನ್ನು ನಾನು ತೆಗೆದುಕೊಂಡಿದ್ದೇನೆ. ನಾನ ಭವಿಷ್ಯ ನಿಧಿಯ ಖಾತೆಯಲ್ಲಿನ ಹಣವನ್ನು ಎರಡು ಬಾರಿ ತೆಗೆದುಕೊಂಡಿದ್ದೇನೆ. 2008 – 09 ಹಾಗೂ 2013 -14 ನೇ ಸಾಲಿನ ಭವಿಷ್ಯ ನಿಧಿ ದಾಖಲೆ ಮಾತ್ರ ಹಾಜರುಪಡಿಸಿದ್ದೇನೆ.

8) ನಾನು ಕಾರ್ಖಾನೆಯ ಕೆಲಸವನ್ನು ಬಹಳ ವರ್ಷಗಳ ಹಿಂದೆಯೇ ರಾಜೀನಾಮೆ ಕೊಟ್ಟು ಬಿಟ್ಟು ಭವಿಷ್ಯ ನಿಧಿ ಖಾತೆಯಿಂದ ಹಣ ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಭವಿಷ್ಯ ಖಾತೆಯಿಂದ ಹಣ ಪಡೆಯುವ ಸಮಯದಲ್ಲಿ ರಾಜೀನಾಮೆ ಪತ್ರದ ಅವಶ್ಯಕತೆ ಇರುತ್ತದೆ ಎಂದು ಹೇಳಿದ್ದರಿಂದ ಕಾರ್ಖಾನೆಗೆ ರಾಜೀನಾಮೆ ಪತ್ರವನ್ನು ಕೊಟ್ಟು ಹಣ ಪಡೆದುಕೊಂಡಿರುತ್ತೇನೆ. ರಾಜೀನಾಮೆ ಕೊಟ್ಟಾಗಿನಿಂದ ನಾನು ಕಾರ್ಖಾನೆಯಲ್ಲಿ ಕೆಲಸ

ಮಾಡಿಲ್ಲ ಎನ್ನುವುದು ಸರಿಯಲ್ಲ. ನಾನು ರಾಜೀನಾಮೆ ಪತ್ರ ಕೊಟ್ಟಾದ ನಂತರ ಕಾರ್ಖಾನೆಯವರು ನನಗೆ ಕೆಲಸಕ್ಕೆ ಕರೆದಿಲ್ಲ ಎನ್ನುವುದು ಸರಿಯಲ್ಲ.

9) ನಾನು ಕಾರ್ಮಿಕ ವಿಮಾ ಯೋಜನೆಯ ಕುರಿತಾದ ದಾಖಲೆ ಹಾಜರು ಮಾಡಿಲ್ಲ ಎನ್ನುವುದು ಸರಿಯಲ್ಲ. ಕಾರ್ಮಿಕ ವಿಮಾ ಯೋಜನೆಯ ದಾಖಲೆಯಲ್ಲಿ ನಾನು ದಿನಾಂಕ 01-05-2016 ರಂದು ಕೆಲಸಕ್ಕೆ ಸೇರಿಕೊಂಡಿದ್ದೇನೆ ಎಂದು ಉಲ್ಲೇಖ ಇರುತ್ತದೆ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ. ದಿನಾಂಕ 30-11-2016 ರಂದು ನಾನು ಕಾರ್ಮಿಕ ವಿಮಾ ಯೋಜನೆಯಲ್ಲಿ ನೊಂದಣಿ ಮಾಡಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ವಿಮಾ ಯೋಜನೆಯು ದಿನಾಂಕ 29-12-2016 ರವರೆಗೆ ಮಾತ್ರ ಉರ್ಜಿತ ಇತ್ತು ಎನ್ನುವುದು ಸರಿಯಲ್ಲ. ಸದರಿ ದಾಖಲೆಯ ಪ್ರಕಾರ ನಾನು ಕೇವಲ 6 ತಿಂಗಳು ಮಾತ್ರ 2 ನೇ ಪಕ್ಷಗಾರ ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ದಿನಗೂಲಿ ನೌಕರನಾಗಿದ್ದರೂ ಸಹ ಕಾರ್ಖಾನೆಯವರು ಮಾನವೀಯತೆಯ ನೆಲೆಯಲ್ಲಿ ನನಗೆ ಕಾರ್ಮಿಕ ವಿಮಾ ಯೋಜನೆಯ ಸೌಲಭ್ಯ ಒದಗಿಸಿದ್ದರು ಎನ್ನುವುದು ಸರಿಯಲ್ಲ.

10) ನಾನು ಕೆಲಸಕ್ಕೆ ರಾಜೀನಾಮೆ ಕೊಟ್ಟು ಎಲ್ಲಾ ಸೌಲಭ್ಯವನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಹಾಜರುಪಡಿಸಿರುವ ಯಾವುದೇ ದಾಖಲೆಯಲ್ಲಿ 2007 ರಿಂದ 2019 ರವರೆಗೆ ನಾನು ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದೇನೆಂದು ತೋರಿಸುವುದಿಲ್ಲ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ.

11) 2019 ರಲ್ಲಿ 2 ನೇ ಪಕ್ಷಗಾರ ಕಾರ್ಖಾನೆ ನಷ್ಟವಿದ್ದ ಕಾರಣ ಮುಚ್ಚಿ ಹೋಗಿತ್ತು ಎನ್ನುವುದು ಸರಿಯಲ್ಲ. ಸದರಿ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿತ್ತು ಎನ್ನುವುದು ಸರಿಯಲ್ಲ. ಕಾರ್ಖಾನೆ ಮುಚ್ಚುವ ಕಾಲಕ್ಕೆ ನಾನು ಅಲ್ಲಿಯೇ ಕೆಲಸ ಮಾಡುತ್ತಿರದ ಕಾರಣ ಅದು ನಷ್ಟದಲ್ಲಿ ಇತ್ತು ಎಂದು ನನಗೆ ಗೊತ್ತಿತ್ತು ಎನ್ನುವುದು ಸರಿಯಲ್ಲ. ನಾನು ರಾಜೀನಾಮೆ ಕೊಟ್ಟು ಕಾರ್ಖಾನೆಯಲ್ಲಿ ಕೆಲಸ ಮಾಡದೇ ಇದ್ದ ಕಾರಣ ಕಾರ್ಖಾನೆ ಮುಚ್ಚುವ ಕಾಲಕ್ಕೆ ನನಗೆ ನೋಟಿಸು ಕೊಡುವ ಅವಶ್ಯಕತೆ ಇರಲಿಲ್ಲ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯವರಿಗೆ ಸಂಪರ್ಕಿಸಿ ಕೆಲಸ ಕೊಡು ಎಂದು ಕೇಳಿಯೇ ಇಲ್ಲ ಎನ್ನುವುದು ಸರಿಯಲ್ಲ. ಕಾರ್ಖಾನೆ ಮುಚ್ಚಿದ ಬಗ್ಗೆ ತಿಳಿದ ನಂತರ ಅಕ್ರಮವಾಗಿ ದುರ್ಲಾಭ ಪಡೆಯಲೆಂದು ನಾನು ಈ ಅರ್ಜಿ ಹೂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು

ಬೇರೆಯವರ ಕುಮ್ಮಕ್ಕಿನಿಂದ ಕಾರ್ಮಿಕ ಇಲಾಖೆಗೆ ಅರ್ಜಿ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಕಾರ್ಮಿಕ ಇಲಾಖೆಗೆ ಕೊಟ್ಟ ಅರ್ಜಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆ ಮುಚ್ಚಿದ ಸಮಯದಲ್ಲಿ ಕೆಲಸ ಮಾಡದೇ ಇದ್ದ ಕಾರಣ ಮತ್ತು ಕಾರ್ಮಿಕನಿರದ ಕಾರಣ 3 ತಿಂಗಳ ಸಂಬಳ ಪಡೆಯುವ ಯಾವುದೇ ಅರ್ಹತೆ ಇಲ್ಲ ಎನ್ನುವುದು ಸರಿಯಲ್ಲ. ಅರ್ಜಿಯಲ್ಲಿ ಕೇಳಿರುವ ಯಾವುದೇ ಪರಿಹಾರ ಪಡೆಯುವ ಅರ್ಹತೆ ನನಗೆ ಇಲ್ಲ ಎನ್ನುವುದು ಸರಿಯಲ್ಲ. ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸುಳ್ಳು ಇರುತ್ತದೆ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯಿಂದ ಎಲ್ಲಾ ಸೌಲಭ್ಯ ಪಡೆದಿರುವ ಕಾರಣ ಹಾಗೂ ನಿರಂತರ ಕಾರ್ಮಿಕನಿರದ ಕಾರಣ ನನಗೆ ಗ್ರ್ಯಾಚ್ಯುಟಿ ಪಡೆಯವ ಅರ್ಹತೆ ಇಲ್ಲ ಎನ್ನುವುದು ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ/ಕಾರ್ಮಿಕ ನ್ಯಾಯಾಧೀಶರು
ಜಿಲ್ಲಾ ನ್ಯಾಯಾಲಯ, ಉಡುಪಿ